ಪಿ.ಡಬ್ಲ್ಯು 2

(ಇಂದು ದಿನಾಂಕ 16-12-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಮುಖ್ಯ ವಿಚಾರಣೆ – ವಾದಿ ಪರ ಶ್ರೀ ಎಸ್.ಯು.ಎ. ವಕೀಲರಿಂದ–**

ನಾನು ಈ ಪ್ರಕರಣದಲ್ಲಿ ವಾದಿಯ ಪರ ಸಾಕ್ಷಿ ಇದ್ದು, ನನ್ನ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದೆ. ಅದನ್ನು ನಾನೇ ಹೇಳಿ ಬರೆಸಿದ್ದೇನೆ.

ಸಾಕ್ಷಿಗೆ ನಿ.ಪಿ. 14 ನ್ನು ತೋರಿಸಲಾಗಿ ಅದರಲ್ಲಿ ಕಂಡುಬರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲಾತಿ ಕ್ರಯದ ಕರಾರು ಆಗಿದ್ದು, ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ಈಗಾಗಲೆ ನಿ.ಪಿ. 14 (ಸಿ) ಎಂದು ಗುರುತಿಸಲಾಗಿರುತ್ತದೆ. ಸದರಿ ದಾಖಲಾತಿಯು ಪ್ರತಿವಾದಿಗೆ ಸೇರಿದ ಸ್ವತ್ತಿನ ಕ್ರಯದ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಆಗಿರುತ್ತದೆ. ಪ್ರತಿವಾದಿಯ ಸ್ವತ್ತನ್ನು ವಾದಿಯು ಕ್ರಯಕ್ಕೆ ಪಡೆಯುವ ಬಗ್ಗೆ ಕಾರಾರು ಮಾಡಿಕೊಳ್ಳಲಾಗಿರುತ್ತದೆ. ನನ್ನನ್ನು ಹೊರತುಪಡಿಸಿ ಪ್ರತಿವಾದಿಯ ಹೆಂಡತಿ ಸವಿತಾ ಎಂಬುವವರು ಕರಾರು ಪತ್ರಕ್ಕೆ ಮತ್ತೊಬ್ಬ ಸಾಕ್ಷಿದಾರರಾಗಿ ಸಹಿ ಮಾಡಿದ್ದು ಅವರ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ನೋಡಿ ಗುರುತಿಸಿದ ಸಹಿಯನ್ನು ಈಗಾಗಲೆ ನಿ.ಪಿ. 14(ಡಿ) ಎಂದು ಗುರುತಿಸಲಾಗಿರುತ್ತದೆ. ಕರಾರಿನ ಸಂದರ್ಭದಲ್ಲಿ ವಾದಿಯು ಪ್ರತಿವಾದಿಗೆ ರೂ. ಒಂದುವರೆ ಲಕ್ಷಗಳನ್ನು ನನ್ನ ಸಮಕ್ಷಮ ನೀಡಿರುತ್ತಾರೆ. ವಾದಿ ಮತ್ತು ಪ್ರತಿವಾದಿ ಕ್ರಯದ ಕರಾರಿಗೆ ಸಹಿ ಮಾಡಿದ್ದು, ಸದರಿಯವರುಗಳ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ವಾದಿ ಮತ್ತು ಪ್ರತಿವಾದಿಯ ಸಹಿಯನ್ನು ನೋಡಿ ಗುರುತಿಸಿದ್ದು, ವಾದಿಯ ಸಹಿಯನ್ನು ಈಗಾಗಲೇ ನಿ.ಪಿ.14(ಬಿ) ಎಂದು ಗುರುತಿಸಲಾಗಿದ್ದು, ಪ್ರತಿವಾದಿಯ ಸಹಿಯನ್ನು ಈಗಾಗಲೇ ನಿ.ಪಿ. 14(ಎ) ಎಂದು ಗುರುತಿಸಲಾಗಿರುತ್ತದೆ.

**(ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎಂ.ಜಿ.ಎಸ್. ವಕೀಲರು ಸಮಯ ಕೋರಿದ್ದು, ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ